**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 3070/2014** **CW**-13 **PW**-9

**ಸಾಕ್ಷಿಯನ್ನು ದಿಃ 05.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ರತ್ನಮ್ಮ |
| ಗಂಡನ ಹೆಸರುಃ | ಚನ್ನೇಗೌಡ |
| ವಯಸ್ಸುಃ | 68 ವರ್ಷ |
| ವೃತ್ತಿಃ | ನಿವೃತ್ತ ಅಂಗನವಾಡಿ ಕಾರ್ಯಕರ್ತೆ |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1985 ರಿಂದ 2016 ರವರಗೆ ನಾನು ಬೂವನಹಳ್ಳಿ ವಡ್ಡರಹಟ್ಟಿ ದಾಖಲೆ ಯಲ್ಲಿ ನಾನು ಅಂಗನವಾಡಿ ಕಾರ್ಯಕರ್ತೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾವು ಪ್ರತಿ ತಿಂಗಳು ಚನ್ನರಾಯಪಟ್ಟಣ ಸಿಡಿಪಿಒ ಕಛೇರಿಗೆ ಮೀಟಿಂಗ್ ಗೆ ಬರುತ್ತಿದ್ದೆವು. 2009 ರಲ್ಲಿ ಎಂದಿನಂತೆ ನಾವು ಚನ್ನರಾಯಪಟ್ಟಣ ಸಿಡಿಪಿಒ ಕಛೇರಿಗೆ ಮೀಟಿಂಗ್ ಗೆ ಬಂದಿದ್ದು ಆಗ ರಂಗನಾಥ್ ರವರು ಸಿಡಿಪಿಒ ಆಗಿದ್ದರು. ಮಿಟಿಂಗ್ ಗೆ ಸಮನ್ವಯ ಹೆಲ್ತ್ ಎಜುಕೇಶನ್ ಪರವಾಗಿ ಕಾರ್ಯದರ್ಶಿಯಾದ ಚಿದಾನಂದ, ಸಂತೋಷ್ ಕುಮಾರ್ ಮತ್ತು ಮೋಹನ್ ರವರು ಅಲ್ಲಿಗೆ ಬಂದಿದ್ದು, ಅವರ ಸಂಸ್ಥೆಯಿಂದ ಮೈಕ್ರೋ ಇನ್ಸೂರೆನ್ಸ್ ಯೋಜನೆ ಬಂದಿದ್ದು, ಗ್ರಾಮೀಣ ಕೂಲಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿರುತ್ತಾರೆ. ನಾವು ಏಜೆಂಟರಾದರೆ ಶೇ 3 ರಂತೆ ಹಣ ನೀಡುವುದಾಗಿ ತಿಳಿಸಿ ಹಣ ನೀಡಿದರೆ ಒಂದು ತಿಂಗಳ ಒಳಗಾಗಿ ಪಾಸ್ ಬುಕ್ ಮತ್ತು ಬಾಂಡ್ ಬರುವುದಾಗಿ ತಿಳಿಸಿದ್ದರು. ನಾವೆಲ್ಲರೂ ಒಪ್ಪಿ 2009 ರಲ್ಲಿಯೇ ಎಲ್ ಐ ಸಿ ಕಛೇರಿ ಚನ್ನರಾಯಪಟ್ಟಣಕ್ಕೆ ಹೋಗಿದ್ದು ಆಗ ಚಿದಾನಂದ, ಸಂತೋಷ್ ಕುಮಾರ್ ಮತ್ತು ಮೋಹನ್ ರವರು ಅಲ್ಲಿದ್ದರು. ಮೈಸೂರು ಎಲ್ ಐ ಸಿ ಪ್ರಧಾನ ಕಛೇರಿಯ ಮ್ಯಾನೇಜರಾದ ವೆಂಕಟೇಶ್ ಮತ್ತು ಕಣ್ಣ ರವರು ಅಲ್ಲಿಯೇ ಇದ್ದರು. ನಾವೆಲ್ಲರೂ ಏಜೆಂಟರಾಗಿ ಕಾರ್ಯ

ನಿರ್ವಹಿಸಲು ಒಪ್ಪಿದ್ದರಿಂದ ನನಗೆ ಕೋಡ್ ನಂಬರ್ 45 ಎಂದು ನೀಡಿರುತ್ತಾರೆ. ನಂತರ ನಾನು ಸಾರ್ವಜನಿಕರಿಗೆ 2009 ರಿಂದ 2013 ರವರೆಗೆ ಒಟ್ಟು 120 ಪಾಲಿಸಿಗಳನ್ನು ಮಾಡಿಸಿರುತ್ತೇನೆ. ಅವರು ನೀಡಿದ ಹಣವನ್ನು ಚನ್ನರಾಯಪಟ್ಟಣದ ಮೈಕ್ರೋ ಇನ್ಸೂರೆನ್ಸ್ ಕಛೇರಿಗೆ ಪಾವತಿ ಮಾಡುತ್ತಿದ್ದೆವು. ಆ ಸಮಯದಲ್ಲಿ ತ್ಯಾಗರಾಜ್, ಮೋಹನ್, ಮಮತ, ರೋಹನ್, ಬೇಬಿ ರವರು ಪಾಸ್ ಬುಕ್ ಗಳಿಗೆ ನಾವು ನೀಡಿದ ಹಣವನ್ನು ಬರೆದುಕೊಡುತ್ತಿದ್ದರು. ಒಟ್ಟು ಹಣಕ್ಕೆ ಒಂದು ರಶೀದಿಯನ್ನು ಸಹ ನೀಡುತ್ತಿದ್ದರು. ಸದರಿ ಹಣವು ಮೈಸೂರಿನ ಪ್ರಧಾನ ಕಛೇರಿಗೆ ಹೋಗುತ್ತಿತ್ತು. ನಂತರ ಚಿದಾನಂದ್ ರವರ ಕಾರಣಾಂತರಗಳಿಂದ ಸಂಸ್ಥೆಯನ್ನು 2012 ರಲ್ಲಿ ಬಿಟ್ಟಿದ್ದು ನಂತರ ಬಾಳಿಗೊಂದು ಗುರಿ ಸಂಸ್ಥೆಯು ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು, ಅದರಲ್ಲಿ ಕಾರ್ಯದರ್ಶಿಯಾಗಿ ಸಂತೋಷ್ ಅಧ್ಯಕ್ಷರಾಗಿ ಲಿಂಗರಾಜು ರವರು ವಹಿಸಿಕೊಂಡಿದ್ದರು. ನಂತರ ನಾವು ಬಾಳಿಗೊಂದು ಗುರಿ ಸಂಸ್ಥೆಗೆ ಹಣವನ್ನು ಪಾವತಿಸುತ್ತಿದ್ದೆವು. ಹಣವನ್ನು ಕಟ್ಟಿದ ನಂತರ ರಶೀದಿಯನ್ನು ನೀಡುತ್ತಿದ್ದರು. ನಾನು 120 ಪಾಲಿಸಿಗಳಿಂದ ಒಟ್ಟು ರೂ. 4,25,000/- ಕಟ್ಟಿರುತ್ತೇನೆ. ಸದರಿ ಹಣವು ಪ್ರಧಾನ ಕಛೇರಿಗೆ ಕೇವಲ ರೂ. 90,000/- ಪಾವತಿಸಿದ್ದು ಉಳಿದ ರೂ. 3,35,000/- ರೂಗಳನ್ನು ಸಂತೋಷ್ ಮತ್ತು ಚಿದಾನಂದರವರು ಕಟ್ಟಿರುವುದಿಲ್ಲ ಎಂದು ತಿಳಿಯಿತು. ಇವರನ್ನು ಬಿಟ್ಟರೆ ಬೇರೆ ಯಾರು ಗೊತ್ತಿಲ್ಲ. ನಂತರ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದು, ಇದರ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಹೇಳಿಕೆಯೊಂದಿಗೆ ನಾನು ಮಾಡಿಸಿದ್ದ ಪಾಲಿಸಿದಾರರ ಹೆಸರು ಮತ್ತು ಸಂಪೂರ್ಣ ವಿವರವನ್ನು ಪೋಲೀಸರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಪೋಲೀಸರಿಗೆ ತಾನು ನೀಡಿದ್ದ ವರದಿಯನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನ್ಯಾಯಾಲಯದಲ್ಲಿರುವ 3ನೇ ಆರೋಪಿಯನ್ನು ತೋರಿಸಲಾಗಿ ಸಾಕ್ಷಿ ಗುರುತಿಸಲಾಗುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ವಿ ವಿ ರವರಿಂದ ಃ**

ನನಗೆ ಸಂಭಳ ಚೆಕ್ ಮೂಲಕ ಬರುತ್ತಿತ್ತು ಎಂದರೆ ಸರಿ. ಸರ್ಕಾರದಿಂದ ಬೇರೆ ಕೆಲಸ ಮಾಡಲು ಅನುಮತಿ ಪಡೆದಿದ್ದೀರ ಎಂದರೆ ಸಾಕ್ಷಿ ಸಿಡಿಪಿಒ ಸಮ್ಮುಖದಲ್ಲಿ ಮಾಹಿತಿ ನೀಡಿದ್ದರು ಎನ್ನುತ್ತಾರೆ. ಲಿಖಿತ ಅನುಮತಿ ಪಡೆದಿರುವುದಿಲ್ಲ. ನಾನು ಜನರಿಗೆ ರಶೀದಿ ನೀಡುತ್ತಿರಲಿಲ್ಲ. ನಾವೇ ಜನರಿಂದ ಪಡೆದ ಹಣವನ್ನು ದುರುಪಯೋಗಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜನರಿಂದ ಹಣವನ್ನು ಪಡೆದು ಸಂಸ್ಥೆಗೆ ಪಾವತಿಸಿಲ್ಲ ಎಂದರೆ ಸರಿಯಲ್ಲ. ಪಾಸ್ ಪುಸ್ತಕಕ್ಕೆ ಸಂಸ್ಥೆಯವರು ಹಣ ಪಡೆದ ಸಂಬಂಧ ಸೀಲ್ ಹಾಕಿರುವುದಿಲ್ಲ. ನಾನು ತಪ್ಪಿಸಿಕೊಳ್ಳಲು ಪಾಸ್ ಪುಸ್ತಕವನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಜನವರಿ 2014 ರಲ್ಲಿ ನಾನು ಸಿಒಡಿ ಮುಂದು ಹೇಳಿಕೆ ನೀಡಿರುತ್ತೇನೆ. ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**